# ಮಂತ್ರ ಮಾಂಗಲ್ಯ ವಿವಾಹ ಸಂಹಿತೆ

ಶ್ರೀಯುತ ——— ಎಂಬ ವರನೆ
ಶ್ರೀಮತಿ ——— ಎಂಬ ವಧುವೆ

ನಿಮ್ಮಿಬ್ಬರ ವಿವಾಹದ ಈ ಸಂದರ್ಭದಲ್ಲಿ ಈ ಕೆಲವು ಮೂಲಭೂತ ಸ್ವಾತಂತ್ರ್ಯದ ಸಂದೇಶಗಳನ್ನು ತಿಳಿಸಿದ್ದೇವೆ. ದಯವಿಟ್ಟು ನೀವಿಬ್ಬರೂ ಗಮನವಿಟ್ಟು ಕೇಳಿರಿ.

1. ಈ ದಿನ ಇಲ್ಲಿ ಈ ರೀತಿ ಮದುವೆಯಾಗುವುದರ ಮೂಲಕ ನೀವು ನಿಮ್ಮ ಎಲ್ಲಾ ಮಾನಸಿಕ ಮತ್ತು ಆಧ್ಯಾತ್ಮಿಕ ಸಂಕೋಲೆ ಮತ್ತು ದಾಸ್ಯಗಳಿಂದ ವಿಮುಕ್ತರಾಗಿ ಸ್ವತಂತ್ರರಾಗುತ್ತಿದ್ದೀರಿ.
2. ನೀವು ಇನ್ನು ಈ ಭೂಮಂಡಲದ ಯಾವುದೇ ಜಾತಿ ಮತ್ತು ಜನಾಂಗಗಳಿಗಿಂತ ಮೇಲಾದವರಲ್ಲ.
3. ಹಾಗೆಯೇ ಯಾವುದೇ ಜಾತಿ ಮತ್ತು ಜನಾಂಗಗಳಿಗಿಂತ ಕೀಳಾದವರೂ ಅಲ್ಲ.
4. ನಿಮ್ಮನ್ನು ಇಂದು ಮನುಷ್ಯ ಸಮಾಜದ ಎಲ್ಲ ಕೃತಕ ಜಾತಿಗಳಿಂದ ಮುಕ್ತರನ್ನಾಗಿ ಮಾಡಿದ್ದೇವೆ.
5. ನಿಮ್ಮನ್ನು ಇಂದು ಎಲ್ಲಾ ಸಂಕುಚಿತ ಮತಧರ್ಮಗಳಿಂದ ಮುಕ್ತರನ್ನಾಗಿ ಮಾಡಿದ್ದೇವೆ.
6. ನಿಮ್ಮನ್ನು ಎಲ್ಲ ಆಚಾರ ಸಂಪ್ರದಾಯಗಳಿಂದ ಮುಕ್ತರನ್ನಾಗಿ ಮಾಡಿದ್ದೇವೆ.
7. ನಿಮ್ಮನ್ನು ಎಲ್ಲಾ ಅಸತ್ಯ ಮತ್ತು ಮೂಢನಂಬಿಕೆಗಳಿಂದ ಮುಕ್ತರನ್ನಾಗಿ ಮಾಡಿದ್ದೇವೆ.
8. ಮನುಷ್ಯನ ಜೀವಿತ ಕಾಲವೇ ಒಂದು ಸುಮುಹೂರ್ತ. ಇದರೊಳಗೆ ನೀನು ಬೇರೆ ಸುಮುಹೂರ್ತಗಳನ್ನೂ, ರಾಹುಕಾಲ, ಗುಳಿಕಕಾಲಗಳನ್ನೂ ನೋಡುವ ಅಗತ್ಯವಿಲ್ಲ. ಕಾಲವು ನಿರ್ಗುಣ.
9. ಎಂದೂ ಸಂಪಾದಿಸಲು, ಸೃಷ್ಟಿಸಲು, ಕೂಡಿಡಲು ಸಾಧ್ಯವೇ ಇಲ್ಲದ, ಮನುಷ್ಯನ ಜೀವಿತಕಾಲದ ಪ್ರತಿ ಕ್ಷಣವೂ ಅತ್ಯಮೂಲ್ಯ. ಯಾರು ಈ ಸತ್ಯವನ್ನು ಅರಿಯುತ್ತಾರೋ ಅವರು ತಮ್ಮ ಕರ್ತವ್ಯ




ಬಸವ ಪರಂಪರೆಯನ್ನು ಪಾಲಿಸುವ ಮತ್ತು ಅದನ್ನು ಅನುಸರಿಸುವ ಜನರಿಗೆ 'ವಚನ ಮಾಂಗಲ್ಯ'ವನ್ನು ಮಾಡಿಸುತ್ತದೆ.

ಶರಣ ತತ್ವದ ಆಧಾರದ ಮೇಲೆ ಮದುವೆ ಕಾರ್ಯವನ್ನು ನೆರವೇರಿಸುವ ಸಂಸ್ಥೆ ಇದನ್ನು ಒಂದು ಆಚರಣೆಯಾಗಿ ಮಾಡುತ್ತಿಲ್ಲ. ಇದನ್ನು ಪ್ರಚಾರ ಅಥವಾ ಆಂದೋಲನದ ರೂಪದಲ್ಲಿಯೂ ಮಾಡುತ್ತಿಲ್ಲ. ಅಪೇಕ್ಷಿಸುವ ಭಕ್ತಾದಿಗಳಿಗೆ ಮದುವೆಯನ್ನು ಮಾಡಿಸುವ ಕೆಲಸವನ್ನು ಈ ಸಂಸ್ಥಾನ ಮಾಡುತ್ತಿದೆ. ಸರಳತೆಯನ್ನು ಉತ್ತೇಜಿಸುವ 'ವಚನ ಮಾಂಗಲ್ಯ' ಬಸವ ಪರಂಪರೆಯ ಅರ್ಥಪೂರ್ಣ ಮುಂದುವರಿಕೆಯೂ ಆಗಿದೆ.

### ಧರ್ಮಸ್ಥಳದ ಸಾಮೂಹಿಕ ಮದುವೆಗಳು

ಧರ್ಮಸ್ಥಳದ ಮಂಜುನಾಥ ಆಡಳಿತ ಮಂಡಳಿ ಪ್ರತಿ ವರ್ಷ ಸಾಮೂಹಿಕ ವಿವಾಹ ಉತ್ಸವವನ್ನು ಏರ್ಪಡಿಸುತ್ತಿದೆ. ಈ ವಿವಾಹಮೇಳದ ಪ್ರಯೋಜನವನ್ನು ನಾಡಿನ ವಿವಿಧ ಭಾಗಗಳ ಜನ ಪಡೆದುಕೊಂಡಿದ್ದಾರೆ. 1972ರಿಂದ ಇದುವರೆಗೆ ಸುಮಾರು 12,500ಕ್ಕೂ ಅಧಿಕ ಜೋಡಿಗಳಿಗೆ ಕಂಕಣಭಾಗ್ಯವನ್ನು ಧರ್ಮಸ್ಥಳದ ಸಾಮೂಹಿಕ ಮದುವೆ ಮಂಟಪದಲ್ಲಿ ಕಲ್ಪಿಸಲಾಗಿದೆ.

ಕಾನೂನಿನ ನಿಯಮಗಳಿಗೆ ಒಳಪಟ್ಟ ಯಾವುದೇ ಜೋಡಿಗೆ ಧರ್ಮಸ್ಥಳದಲ್ಲಿ ಮದುವೆಯನ್ನು ಉಚಿತವಾಗಿ ನೆರವೇರಿಸಲಾಗುತ್ತಿದೆ. ಏಪ್ರಿಲ್ ಅಥವಾ ಮೇ ತಿಂಗಳ ಆರಂಭದಲ್ಲಿ ಗೋಧೂಳಿ ಮುಹೂರ್ತದಲ್ಲಿ ಸಾಮೂಹಿಕ ವಿವಾಹ ಮಹೋತ್ಸವವನ್ನು ನೆರವೇರಿಸಲಾಗುತ್ತಿದೆ. ಕಳೆದ 52 ವರ್ಷದಿಂದ ಮಂಜುನಾಥ ದೇವಳದಲ್ಲಿ ವಿವಾಹ ಮಹೋತ್ಸವ ನಡೆಯುತ್ತಿದೆ. ಧರ್ಮಸ್ಥಳದಲ್ಲಿನ ಸಾಮೂಹಿಕ ಮದುವೆಯ ಮಾಹಿತಿಗೆ ಸಂಪರ್ಕ ಸಂಖ್ಯೆ: 9663464648

### ಅಮಾವಾಸ್ಯೆಯಲ್ಲೂ ಪ್ರೇಮ ಚಂದಿರ

ಚಿತ್ರದುರ್ಗದ ಮುರುಘಾಮಠದಲ್ಲಿ ಪ್ರತಿ ತಿಂಗಳ 5ನೇ ತಾರೀಕಿನಂದು ಉಚಿತ ಮದುವೆಯನ್ನು ಸುಮಾರು 35 ವರ್ಷಗಳಿಂದ ನಡೆಸಲಾಗುತ್ತಿದೆ. ಇದುವರೆಗೆ 25 ಸಾವಿರಕ್ಕೂ ಅಧಿಕ ಜೋಡಿಗಳ ಬದುಕಿನ ಬಂಡಿಗೆ ಇಂಧನವನ್ನು ಶ್ರೀಮಠ ತುಂಬಿದೆ. ಈ ಮಾದರಿಯ ಮದುವೆಯನ್ನು ಮಲ್ಲಿಕಾರ್ಜುನ ಮುರುಘರಾಜೇಂದ್ರ ಸ್ವಾಮೀಜಿ ಆರಂಭಿಸಿದರು. ಈವರೆಗೆ ಸಾಮೂಹಿಕ ಮದುವೆಗೆ ಯಾವುದೇ ಧಕ್ಕೆ ಆಗಿಲ್ಲ. ಕೊರೊನಾ ಸಮಯದಲ್ಲಿಯೂ ಕೋವಿಡ್ ನಿಯಮಗಳನ್ನು ಪಾಲಿಸಿ ಮದುವೆಯನ್ನು ನೆರವೇರಿಸಿದ ಹೆಚ್ಚುಗಾರಿಕೆ ಮುರುಘಾಮಠಕ್ಕೆ ಇದೆ.

ವಚನ ಮಾಂಗಲ್ಯವನ್ನು ಶರಣ ಪದ್ಧತಿಯ ನಿಜಾಚರಣೆ ಮೂಲಕ ಮಾಡಲಾಗುತ್ತದೆ. ಬಸವತತ್ವದ ವಚನಗಳ ಆಧರಿಸಿದ

